# All India Radio: Bangalore
# National Bulletin In Kannada
## ಆಕಾಶವಾಣಿ, ಬೆಂಗಳೂರು
## ರಾಷ್ಟ್ರೀಯ ವಾರ್ತೆಗಳು

03.03.2026 19.35 p.m.

*************

ಮುಖ್ಯಾಂಶಗಳು

- ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ತನ್ನ ರಾಜತಾಂತ್ರಿಕ ನಿಲುವನ್ನು ಬಲವಾಗಿ ಪುನರುಚ್ಚರಿಸಿದೆ ಭಾರತ.
- ಜಾಗತಿಕ ಅನಿಶ್ಚಿತತೆಯ ನಡುವೆ ಭಾರತದಲ್ಲಿ, ಕಚ್ಚಾ ತೈಲ, ದ್ರವೀಕೃತ ಅನಿಲ ಮೀಸಲು ೨೫ ದಿನಗಳಿಗೆ ಲಭ್ಯ
- ಕರಾವಳಿ ಕಾವಲು ಪಡೆ ಮತ್ತು ನೌಕಾಪಡೆಯ ಬಲವರ್ಧನೆಗೆ ೫ ಸಾವಿರದ ೮೩ ಕೋಟಿ ರೂಪಾಯಿಗಳ ಒಪ್ಪಂದಗಳಿಗೆ ರಕ್ಷಣಾ ಸಚಿವಾಲಯ ಸಹಿ.
- ಪ್ರಸ್ತುತ ಸಾಲಿನ ಚೆಸ್ ಶ್ರೇಯಾಂಕದ ಟಾಪ್-೧೦ರಲ್ಲಿ ಸ್ಥಾನ ಪಡೆದ ಹಾಲಿ ವಿಶ್ವ ಚಾಂಪಿಯನ್ ಭಾರತದ ಗುಕೇಶ್

***************

ಪಶ್ಚಿಮ ಏಷ್ಯಾ ಪ್ರದೇಶದಲ್ಲಿ ನಡೆಯುತ್ತಿರುವ ಸಂಘರ್ಷದಲ್ಲಿ ತನ್ನ ರಾಜತಾಂತ್ರಿಕತೆಯ ಕರೆಯನ್ನು ಭಾರತ ಇಂದು ಬಲವಾಗಿ ಪುನರುಚ್ಚರಿಸಿದೆ.

ಸಂಘರ್ಷವನ್ನು ಶೀಘ್ರವಾಗಿ ಅಂತ್ಯಗೊಳಿಸುವ ಪರವಾಗಿ ಭಾರತ ಸ್ಪಷ್ಟವಾಗಿ ಧ್ವನಿ ಎತ್ತುತ್ತಿದೆ ಎಂದು ಹೇಳಿರುವ ವಿದೇಶಾಂಗ ಸಚಿವಾಲಯದ ವಕ್ತಾರರು, ಸಂಘರ್ಷದಲ್ಲಿ ಬಲಿಯಾದ ಅನೇಕ ಜೀವಗಳಿಗೆ ದುಃಖ ವ್ಯಕ್ತಪಡಿಸಿದರು.

ಗಲ್ಫ್ ಪ್ರದೇಶಗಳಲ್ಲಿ ಸುಮಾರು ಒಂದು ಕೋಟಿ ಭಾರತೀಯ ನಾಗರಿಕರಿದ್ದು, ಅವರ ಸುರಕ್ಷತೆ ಮತ್ತು ಯೋಗಕ್ಷೇಮವು ಅತ್ಯಂತ ಆದ್ಯತೆಯಾಗಿದೆ. ಅವರ ಮೇಲೆ ನಕಾರಾತ್ಮಕ ಪರಿಣಾಮ ಬೀರುವಂತಹ ಯಾವುದೇ ಬೆಳವಣಿಗೆಯನ್ನು ಭಾರತವು ಸಹಿಸಲು ಸಾಧ್ಯವಿಲ್ಲ ಎಂದು ವಕ್ತಾರರು ಹೇಳಿದರು.

ವ್ಯಾಪಾರ ಮತ್ತು ಇಂಧನ ಪೂರೈಕೆ ಸರಪಳಿಗಳು ಸಹ ಸಂಘರ್ಷದಿಂದ ಅಡೆಚಣೆಗೊಳಗಾಗಿವೆ ಎಂದಿರುವ ಅವರು, ಇಂತಹ ಪ್ರಮುಖ ಅಡಚಣೆಗಳು ಭಾರತೀಯ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ ಎಂದು ಒತ್ತಿ ಹೇಳಿದರು.

ಜಾಗತಿಕ ಕಾರ್ಯಪಡೆಯಲ್ಲಿ ಪ್ರಮುಖವಾಗಿರುವ ದೇಶವಾಗಿ ಭಾರತವು, ವ್ಯಾಪಾರಿ ಹಡಗುಗಳ ಮೇಲಿನ ದಾಳಿಯನ್ನು ದೃಢವಾಗಿ ವಿರೋಧಿಸುತ್ತದೆ. ಕಳೆದ ಕೆಲವು ದಿನಗಳಲ್ಲಿ ಇಂತಹ ದಾಳಿಗಳ ಪರಿಣಾಮವಾಗಿ ಕೆಲವು ಭಾರತೀಯ ಪ್ರಜೆಗಳು ಪ್ರಾಣ ಕಳೆದುಕೊಂಡಿದ್ದು, ಹಲವರು ಕಾಣೆಯಾಗಿದ್ದಾರೆ ಎಂದು ವಕ್ತಾರರು ಹೇಳಿದರು.

ಫೆಬ್ರವರಿ ೨೮ ರಂದು ಇರಾನ್ ಮತ್ತು ಗಲ್ಫ್ ಪ್ರದೇಶದಲ್ಲಿ ಸಂಘರ್ಷ ಪ್ರಾರಂಭವಾದಾಗ, ನವದೆಹಲಿ ತೀವ್ರ ಕಳವಳ ವ್ಯಕ್ತಪಡಿಸಿತ್ತು. ಆ ಸಮಯದಲ್ಲಿಯೂ ಸಹ, ಭಾರತವು ಯುದ್ಧದಲ್ಲಿ ಪಾಲ್ಗೊಂಡ ಎಲ್ಲಾ ಕಡೆಯವರು ಸಂಯಮದಿಂದ ವರ್ತಿಸುವಂತೆ ಮತ್ತು ಯುದ್ಧ ಉಲ್ಬಣಗೊಳ್ಳುವುದನ್ನು ತಪ್ಪಿಸುವಂತೆ ಹಾಗೂ ನಾಗರಿಕರ ಸುರಕ್ಷತೆಗೆ ಆದ್ಯತೆ ನೀಡುವಂತೆ ಒತ್ತಾಯಿಸಿತ್ತು.

ಬಾಧಿತ ದೇಶಗಳಲ್ಲಿನ ಭಾರತೀಯ ರಾಯಭಾರ ಕಚೇರಿಗಳು ಮತ್ತು ದೂತಾವಾಸಗಳು ಭಾರತೀಯ ಪ್ರಜೆಗಳು ಮತ್ತು ಸಮುದಾಯ ಸಂಸ್ಥೆಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದು, ಸೂಕ್ತವಾಗಿ ನಿಯಮಿತ ಸಲಹೆಗಳನ್ನು ನೀಡುತ್ತಿವೆ. ಸಂಘರ್ಷದಲ್ಲಿ ಸಿಲುಕಿರುವವರಿಗೆ ಅವರು ಸಾಧ್ಯವಿರುವ ಎಲ್ಲ ಸಹಾಯವನ್ನು ಸಹ ನೀಡುತ್ತಿದ್ದಾರೆ.

ಸರ್ಕಾರವು ಎಲ್ಲಾ ಬೆಳವಣಿಗೆಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುವುದನ್ನು ಮತ್ತು ರಾಷ್ಟ್ರೀಯ ಹಿತಾಸಕ್ತಿಯಲ್ಲಿ ಸಂಬಂಧಿತ ನಿರ್ಧಾರಗಳನ್ನು ತೆಗೆದುಕೊಳ್ಳುವುದನ್ನು ಮುಂದುವರಿಸುತ್ತದೆ ಎಂದು ಅವರು ಖಚಿತಪಡಿಸಿದರು.

****************

ಕಚ್ಚಾ ತೈಲ, ದ್ರವೀಕೃತ ಪೆಟ್ರೋಲಿಯಂ ಅನಿಲ- ಎಲ್‌ಪಿಜಿ ಮತ್ತು ದ್ರವೀಕೃತ ನೈಸರ್ಗಿಕ ಅನಿಲ- ಎಲ್‌ಎನ್‌ಜಿಗಳಿಗೆ ಸಂಬಂಧಿಸಿದಂತೆ ಭಾರತವು ಸಾಕಷ್ಟು ಆರಾಮದಾಯಕ ಸ್ಥಿತಿಯಲ್ಲಿದೆ.

ಸರ್ಕಾರಿ ಮೂಲಗಳ ಪ್ರಕಾರ, ೨೫ ದಿನಗಳ ಕಚ್ಚಾ ತೈಲ ಮೀಸಲು ಮತ್ತು ದೇಶದ ಬಂದರುಗಳೆಡೆಗೆ ಮುಖಮಾಡಿರುವ ಹಡಗುಗಳಲ್ಲಿ ಸಾಗಣೆಯಲ್ಲಿರುವ ಪ್ರಮಾಣವೂ ಸೇರಿದಂತೆ ೨೫ ದಿನಗಳ ಪೆಟ್ರೋಲಿಯಂ ಉತ್ಪನ್ನಗಳನ್ನು ಹೊಂದಿದೆ.

ಭಾರತವು ತನ್ನ ಕಚ್ಚಾ ತೈಲದ ಅಗತ್ಯದ ೮೫ ಪ್ರತಿಶತಕ್ಕಿಂತ ಹೆಚ್ಚು ಆಮದು ಮಾಡಿಕೊಳ್ಳುತ್ತದೆ, ಅದರಲ್ಲಿ ಸುಮಾರು ೫೦ ಪ್ರತಿಶತವನ್ನು ಮಧ್ಯಪ್ರಾಚ್ಯ ದೇಶಗಳು ಹಾರ್ಮುಜ್ ಜಲಸಂಧಿಯ ಮೂಲಕ ಪೂರೈಸುತ್ತವೆ. ಇರಾನ್ ಯುದ್ಧದ ನಂತರ ಇದಕ್ಕೆ ಅಡ್ಡಿಯಾಗಿದೆ.

ಆದಾಗ್ಯೂ, ಆಫ್ರಿಕಾ, ರಷ್ಯಾ ಮತ್ತು ಅಮೇರಿಕಾದಿಂದ ಆಮದುಗಳನ್ನು ಹೆಚ್ಚಿಸಿ, ಕಾರ್ಯತಂತ್ರದ ನಿಕ್ಷೇಪಗಳ ಮೂಲಕ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸಿರುವ ಭಾರತವು ತನ್ನ ಪೆಟ್ರೋಲಿಯಂ ತೈಲ ಮೂಲಗಳನ್ನು ವೈವಿಧ್ಯಗೊಳಿಸಿದೆ.

ಇಂಡಿಯನ್ ಆಯಿಲ್, ಭಾರತ್ ಪೆಟ್ರೋಲಿಯಂ ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂನಂತಹ ದೇಶದ ತೈಲ ಮಾರುಕಟ್ಟೆ ಕಂಪನಿಗಳು ಹಲವಾರು ವಾರಗಳವರೆಗೆ ಸರಬರಾಜುಗಳನ್ನು ಹೊಂದಿದ್ದು, ಹಲವಾರು ಮಾರ್ಗಗಳಿಂದ ಇಂಧನ ಸರಬರಾಜುಗಳನ್ನು ಪಡೆಯುತ್ತಲೇ ಇವೆ ಎಂದು ಐಎಎನ್‌ಎಸ್ ಸುದ್ದಿಸಂಸ್ಥೆ ವರದಿ ಮಾಡಿದೆ.

ಇದಲ್ಲದೆ, ಬಫರ್ ಸ್ಟಾಕ್ ಅನ್ನು ಮತ್ತಷ್ಟು ಹೆಚ್ಚಿಸಲು ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡದಂತೆ ಸರ್ಕಾರವು ತೈಲ ಮಾರುಕಟ್ಟೆ ಕಂಪನಿಗಳಿಗೆ ನಿರ್ದೇಶನ ನೀಡಿದೆ.

****************

ಪ್ರಸ್ತುತ ಟೆಹ್ರಾನ್ ಮತ್ತು ಬೈರುತ್‌ನಲ್ಲಿರುವ ಮಿಲಿಟರಿ ಪಡೆಗಳ ವಿರುದ್ಧ ಏಕಕಾಲದಲ್ಲಿ ಗುರಿಮಾಡಿ ಇಸ್ರೇಲ್ ದಾಳಿ ನಡೆಸುತ್ತಿದೆ.

ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿರುವ ಇಸ್ರೇಲ್ ರಕ್ಷಣಾ ಪಡೆಗಳು, ತನ್ನ ಸೈನಿಕರು ದಕ್ಷಿಣ ಲೆಬನಾನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ವರ್ಧಿತ ಮುಂಚೂಣಿ ರಕ್ಷಣಾ ಕಾರ್ಯಾಚರಣೆಯ ಭಾಗವಾಗಿ ಗಡಿ ಪ್ರದೇಶದ ಬಳಿ ಹಲವಾರು ಹಂತಗಳಲ್ಲಿ ಅವರನ್ನು ನಿಯೋಜಿಸಲಾಗಿದೆ ಎಂದು ಹೇಳಿಕೆ ನೀಡಿದೆ.

ಇರಾನ್ ಆಡಳಿತದ ಪರವಾಗಿ ಹೆಜ್ಬೊಲ್ಲಾವು ಇಸ್ರೇಲ್ ಮೇಲೆ ದಾಳಿ ನಡೆಸಲು ಮುಂದಾಗಿದ್ದು, ಪರಿಣಾಮವಾಗಿ ಇಸ್ರೇಲ್ ಹೆಜ್ಬೊಲ್ಲಾದ ಮೂಲಸೌಕರ್ಯದ ವಿರುದ್ಧ ಗುರಿಯಿಟ್ಟು ದಾಳಿ ನಡೆಸುತ್ತಿದೆ ಎಂದು ಇಸ್ರೇಲ್ ಆರೋಪಿಸಿದೆ.

****************

ದಕ್ಷಿಣ ಇರಾನ್‌ನ ಗೆರಾಶ್ ನಗರದ ಬಳಿ ಇಂದು ೪.೩ ತೀವ್ರತೆಯ ಭೂಕಂಪ ಸಂಭವಿಸಿದೆ.

ಅಮೇರಿಕಾ ಭೂವೈಜ್ಞಾನಿಕ ಇಲಾಖೆಯ ಪ್ರಕಾರ, ಭೂಮಿಯ ಒಳಗೆ ಸುಮಾರು ೧೦ ಕಿಲೋಮೀಟರ್ ಆಳದಲ್ಲಿ ಭೂಕಂಪ ಸಂಭವಿಸಿದೆ. ಘಟನೆಯಲ್ಲಿ ಇಲ್ಲಿಯವರೆಗೆ ಯಾವುದೇ ಗಂಭೀರ ಹಾನಿ ಅಥವಾ ಸಾವುನೋವುಗಳು ವರದಿಯಾಗಿಲ್ಲ.

ದಕ್ಷಿಣ ಇರಾನ್ ಭಾಗವು ಜಾಗ್ರೋಸ್ ಬೆಲ್ಟ್ ಎಂದು ಕರೆಯಲ್ಪಡುವ ಭೂಕಂಪನಶೀಲ ಸಕ್ರಿಯ ವಲಯದ ಭಾಗವಾಗಿದ್ದು, ಅಲ್ಲಿ ಟೆಕ್ಟೋನಿಕ್ ಚಲನೆಯಿಂದಾಗಿ ಭೂಕಂಪಗಳು ಸಾಮಾನ್ಯವಾಗಿವೆ.

****************

ಇರಾನ್‌ನ ಸರ್ವೋಚ್ಚ ನಾಯಕ ಅಯತುಲ್ಲಾ ಸೈಯದ್ ಅಲಿ ಖಮೇನಿ ಹತ್ಯೆಯನ್ನು ವಿರೋಧಿಸಿ ಜಮ್ಮು & ಕಾಶ್ಮೀರ ಕಣಿವೆಯ ಕೆಲವು ಭಾಗಗಳಲ್ಲಿ ನಡೆದ ಪ್ರತಿಭಟನೆಗಳ ನಂತರ, ಕಾಶ್ಮೀರದ ಎಲ್ಲಾ ಜಿಲ್ಲೆಗಳಲ್ಲಿ ನಿರ್ಬಂಧಗಳನ್ನು ವಿಧಿಸಲಾಗಿರುವುದರಿಂದ ಸತತ ಎರಡನೇ ದಿನವೂ ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದೆ.

ಇರಾನ್‌ನಲ್ಲಿ ಅಮೆರಿಕ-ಇಸ್ರೇಲ್ ಜಂಟಿಯಾಗಿ ನಡೆಸಿದ ಬಾಂಬ್ ದಾಳಿಯಲ್ಲಿ ಇರಾನ್‌ನ ಸರ್ವೋಚ್ಚ ನಾಯಕ ಖಮೇನಿ ಹತ್ಯೆ ನಡೆದಿತ್ತು.

ಪ್ರಸ್ತುತ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಲು, ಶಾಂತಿಯುತ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ಮತ್ತು ಯಾವುದೇ ಅಹಿತಕರ ಘಟನೆಗಳನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಕಾಶ್ಮೀರ ಪ್ರದೇಶದಲ್ಲಿ ಇಂದು ೨ನೇ ದಿನವೂ ಎಲ್ಲಾ ಸರ್ಕಾರಿ, ಖಾಸಗಿ ಶಾಲೆಗಳು ಮತ್ತು ಕಾಲೇಜುಗಳಿಗೆ ರಜೆ ನೀಡಲಾಗಿದೆ. ಆಯಾ ಸಂಸ್ಥೆಗಳಿಂದ ಮುಂದಿನ ಅಧಿಸೂಚನೆಗಳು ಬರುವವರೆಗೆ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚುವರಿ ಪೊಲೀಸ್ ಮತ್ತು ಅರೆಸೈನಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಪ್ರದೇಶದಾದ್ಯಂತ ಭದ್ರತೆಯನ್ನು ಹೆಚ್ಚಿಸಲಾಗಿದೆ. ಸಂಚಾರವನ್ನು ನಿಯಂತ್ರಿಸಲು ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಭದ್ರತಾ ಸಿಬ್ಬಂದಿ ಗಸ್ತು ನಡೆಸುತ್ತಿದ್ದಾರೆ.

****************

ಭಾರತೀಯ ಕರಾವಳಿ ಕಾವಲು ಪಡೆ ಮತ್ತು ಭಾರತೀಯ ನೌಕಾಪಡೆಯ ಸಾಮರ್ಥ್ಯಗಳನ್ನು ಬಲಪಡಿಸಲು ರಕ್ಷಣಾ ಸಚಿವಾಲಯ ಇಂದು ೫ ಸಾವಿರದ ೮೩ ಕೋಟಿ ರೂಪಾಯಿಗಳ ಎರಡು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದೆ.

ರಾಷ್ಟ್ರ ರಾಜಧಾನಿಯ ಸೌತ್ ಬ್ಲಾಕ್‌ನಲ್ಲಿ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ಅವರ ಸಮ್ಮುಖದಲ್ಲಿ ಈ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

ಒಟ್ಟು ಮೊತ್ತದಲ್ಲಿ, ಭಾರತೀಯ ಕರಾವಳಿ ಕಾವಲು ಪಡೆಗಾಗಿ ಕಡಲ ಪಾತ್ರದಲ್ಲಿ ಆರು ಅತ್ಯಾಧುನಿಕ ಹಗುರ ಹೆಲಿಕಾಪ್ಟರ್‌ಗಳ (ಂಐಉಊ ಒಞ-III) ಖರೀದಿಗಾಗಿ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನೊಂದಿಗೆ ೨ ಸಾವಿರದ ೯೦೧ ಕೋಟಿ ರೂಪಾಯಿಗಳ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

ಈ ಖರೀದಿಯು, ಭಾರತೀಯ-ಸ್ಥಳೀಯವಾಗಿ ವಿನ್ಯಾಸಗೊಳಿಸಿದ, ಅಭಿವೃದ್ಧಿಪಡಿಸಿದ ಮತ್ತು ತಯಾರಿಸಿದ ಅಸ್ತ್ರಗಳ ವರ್ಗದ ಅಡಿಯಲ್ಲಿ ಒಪ್ಪಂದವನ್ನು ಅಂತಿಮಗೊಳಿಸಲಾಗಿದೆ.

****************

ನವದೆಹಲಿಯ ಸಂಸತ್ ಭವನದಲ್ಲಿ ಇಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಕೇಂದ್ರ ಗ್ರಾಮೀಣಾಭಿವೃದ್ಧಿ ರಾಜ್ಯ ಖಾತೆ ಸಚಿವ ಚಂದ್ರಶೇಖರ್ ಪೆಮ್ಮಸಾನಿ ಅವರು ಉಪರಾಷ್ಟ್ರಪತಿ ಸಿ. ಪಿ. ರಾಧಾಕೃಷ್ಣನ್ ಅವರನ್ನು ಭೇಟಿ ಮಾಡಿದರು.

ಸಾರ್ವಜನಿಕರೆಲ್ಲರಿಗೂ ವಸತಿ, ಗ್ರಾಮೀಣ ಉದ್ಯೋಗ, ಕೌಶಲ್ಯ ಮತ್ತು ಸಾಮರ್ಥ್ಯ ವೃದ್ಧಿ ಹಾಗೂ ಸಮುದಾಯ ಮೂಲಸೌಕರ್ಯ ಸೇರಿದಂತೆ ಗ್ರಾಮೀಣ ಪರಿವರ್ತನೆ ಮತ್ತು ಸಾರ್ವಜನಿಕ ಕಲ್ಯಾಣವನ್ನು ಗುರಿಯಾಗಿಟ್ಟುಕೊಂಡು ಸಚಿವಾಲಯದ ವಿವಿಧ ಉಪಕ್ರಮಗಳ ಕುರಿತು ಭೇಟಿಯ ಸಂದರ್ಭದಲ್ಲಿ ಉಪರಾಷ್ಟ್ರಪತಿಗಳಿಗೆ ವಿವರಿಸಲಾಯಿತು.

****************

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಹೋಳಿ ಹಬ್ಬದ ಮುನ್ನಾದಿನವಾದ ಇಂದು ದೇಶದ ನಾಗರಿಕರಿಗೆ ಶುಭಾಶಯಗಳನ್ನು ಕೋರಿದ್ದಾರೆ.

ಹೋಳಿ ಹಬ್ಬವು ಸಾಮಾಜಿಕ ಸಾಮರಸ್ಯದ ಸಂದೇಶವನ್ನು ನೀಡುವ ಸಂತೋಷ ಮತ್ತು ಆಚರಣೆಯ ಹಬ್ಬವಾಗಿದೆ ಎಂದು ರಾಷ್ಟ್ರಪತಿಗಳು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ. ಈ ಹಬ್ಬವು ಸಮಾಜದಲ್ಲಿ ಪ್ರೀತಿ ಮತ್ತು ಭರವಸೆಯನ್ನು ಹರಡುತ್ತದೆ ಮತ್ತು ಸಾಮಾಜಿಕ ಒಗ್ಗಟ್ಟಿನ ಮನೋಭಾವವನ್ನು ಬಲಪಡಿಸುತ್ತದೆ ಎಂದು ರಾಷ್ಟ್ರಪತಿ ಮುರ್ಮು ಹೇಳಿದರು.

****************

ಹಾಲಿ ಚೆಸ್ ವಿಶ್ವ ಚಾಂಪಿಯನ್ ಗುಕೇಶ್ ದೊಮ್ಮರಾಜು ಮಾರ್ಚ್ ೨೦೨೬ರ ಸಾಲಿನ ಚೆಸ್ ಶ್ರೇಯಾಂಕದ ಟಾಪ್-೧೦ ರಲ್ಲಿ ಸ್ಥಾನ ಪಡೆದಿದ್ದಾರೆ.

ಅಂತಾರಾಷ್ಟ್ರೀಯ ಚೆಸ್ ಫೆಡರೇಶನ್-ಎಫ್ಐಡಿಇ ಕಳೆದ ಸೋಮವಾರ ಲೆಕ್ಕಾಚಾರದಲ್ಲಿನ ದೋಷವನ್ನು ಸರಿಪಡಿಸಿದ ನಂತರ ಈ ಶ್ರೇಯಾಂಕವನ್ನು ಪ್ರಕಟಿಸಿದೆ.

ನಿಯಮಗಳನ್ನು ಪಾಲಿಸದ ರಷ್ಯಾದ ಚೆಸ್ ಕ್ರೌನ್ ಪಂದ್ಯವನ್ನು ಮಾರ್ಚ್ ೨೦೨೬ರ ಎಫ್ಐಡಿಇ ರೇಟಿಂಗ್ ಪಟ್ಟಿಯಲ್ಲಿ ತಪ್ಪಾಗಿ ಸೇರಿಸಲಾಗಿದೆ. ತಪ್ಪು ಪತ್ತೆಯಾದ ನಂತರ, ಅರ್ಹತಾ ಆಯೋಗ ನಿಯಮಗಳನ್ನು ಅನುಸರಿಸಿ ಎಫ್ಐಡಿಇ ರೇಟಿಂಗ್ ವ್ಯವಸ್ಥೆಯಿಂದ ಈವೆಂಟ್ ಅನ್ನು ತೆಗೆದುಹಾಕಿದೆ ಎಂದು ಎಫ್ಐಡಿಇ ಹೇಳಿದೆ.

********ಮುಕ್ತಾಯ********